2019 ಕ.ತೀ.ವ 472

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಕರ್ನಾಟಕ ರಾಜ್ಯ ಮತ್ತು ಇತರರು –ವಿರುದ್ಧ– ವಿ.ಎಚ್. ಅಗರ್‌ಖೇಡ್ ಮತ್ತು ಮತ್ತೊಬ್ಬರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಕ್ರಮಾದೇಶ VII ನಿಯಮ 11

ಪ್ರಕರಣದ ಯಾವುದೇ ಹಂತದಲ್ಲಿ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರವು ನ್ಯಾಯಾಲಯಗಳಿಗೆ ಇರುತ್ತದೆ. ಕರ್ನಾಟಕ ಸಿವಿಲ್ ಸೇವೆಗಳ ನಿಯಮ 214(3)ರ ಅಡಿ ಸಿವಿಲ್ ಅಧಿಕಾರಿಯು ನಿವೃತ್ತಿ ಹೊಂದಿದ ನಂತರ ನಾಲ್ಕು ವರ್ಷದ ನಂತರ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣವನ್ನು ಹೂಡುವಂತಿಲ್ಲ.

ಪ್ರಸ್ತುತ ಪ್ರಕರಣದಲ್ಲಿ ಅಧಿಕಾರಿಯು ನಿವೃತ್ತಿ ಹೊಂದಿದ 9 ವರ್ಷ 1 ತಿಂಗಳ ನಂತರ ಮೊಕದ್ದಮೆಯನ್ನು ಹೂಡಲಾಗಿದೆ. ಆದ್ದರಿಂದ ಅಧೀನ ನ್ಯಾಯಾಲಯವು ಕರ್ನಾಟಕ ಸಿವಿಲ್ ಸೇವೆಗಳ ನಿಯಮ, 214(3)ರ ಅಡಿ ನಿಯಮಗಳನ್ನು ಅನ್ವಯಿಸಿ, ಪ್ರಕರಣವನ್ನು ವಜಾಗೊಳಿಸಿರುವುದು ಸೂಕ್ತವಾಗಿದೆ ಎಂದು ಈ ಮೇಲ್ಮನವಿಯನ್ನು ವಜಾಗೊಳಿಸಲಾಯಿತು.

*ನಿಯತ ಮೊದಲ ಅಪೀಲು ಸಂ. 200041/2016, ದಿನಾಂಕ 30ನೇ ಮೇ, 2017.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *ಆರ್.ಎಫ್.ಎ.ಸಂ. 200057/2006*
   *ಕರ್ನಾಟಕ ರಾಜ್ಯ –ವಿರುದ್ಧ–*
   *ಸಂಗಪ್ಪ ಬಿ.* *(ಉಲ್ಲೇ) 13*
2. *1973 ಮೈ ಲಾ ಜರ್ನಲ್ 41, ಬಾಬು ಸಂಖ್ಯೆ 87*
   *ಬಿ.ವಿ. ಸದಾನಂದ ಶೆಟ್ಟಿ –ವಿರುದ್ಧ–*
   *ಮೈಸೂರು ರಾಜ್ಯ* *(ಉಲ್ಲೇ) 13*
3. *ಎಪಿಆರ್ 1937 ಸಿಂಧ 55*
   *ರಾಜ್ಯ ಕಾರ್ಯದರ್ಶಿ –ವಿರುದ್ಧ– ಕರಾಚಿ ಪುರಸಭೆ* *(ಉಲ್ಲೇ) 16*

ಅರ್ಜಿದಾರರ ಪರ: ಶ್ರೀ ಆರ್.ವಿ. ನಾಡಗೌಡ, ಹೆಚ್ಚುವರಿ ಅಡ್ವೋಕೇಟ್ ಜನರಲ್
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಟಿ.ಜಿ. ಆನಂದಶೆಟ್ಟಿ, ವಕೀಲರು

**ತೀರ್ಪು**

**ನ್ಯಾಯಮೂರ್ತಿ ಬಿ.ಎ. ಪಾಟೀಲ್:**

ಕರ್ನಾಟಕ ರಾಜ್ಯದ ಬೀದರ್ ಜಿಲ್ಲಾಧಿಕಾರಿ, ಜಲ ಸಂಪನ್ಮೂಲ ಇಲಾಖೆ, ಐಪಿಸಿ ವೃತ್ತ, ಬೀದರ್‌ನ ಅಧೀಕ್ಷಕ ಇಂಜಿನಿಯರ್ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್, ಜಲ ಸಂಪನ್ಮೂಲ ಇಲಾಖೆ, ಕೆಪಿಸಿ ವಿಭಾಗ ಸಂ.1, ಬೀದರ್ ಇವರುಗಳು ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ಬೀದರ್ ಇವರು ದಿನಾಂಕ 30.1.2013ರಂದು ಮೂಲ ದಾವೆ ಸಂಖ್ಯೆ: 65/ 2011ರಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ನಿಯತ ಮೊದಲ ಅಪೀಲನ್ನು ದಾಖಲಿಸಿರುವರು.

2. ಅಪೀಲನ್ನು ಸಲ್ಲಿಸುವುದಕ್ಕೆ ಆಗಿರುವ ವಿಳಂಬವನ್ನು ಮನ್ನಾ ಮಾಡುವುದಕ್ಕೆ ಪರಿಗಣಿಸಬೇಕೆಂದು ಸಹ ಅಪೀಲಿನಲ್ಲಿ ಕೋರಲಾಗಿದೆ. ಆಗಿದ್ದಾಗ್ಯೂ, ನಾವು ಮಾನ್ಯ ಹೆಚ್ಚುವರಿ ಅಡ್ವೋಕೇಟ್ ಜನರಲ್‌ರವರಾದ ಶ್ರೀ ಆರ್.ವಿ. ನಾಡಗೌಡ ಮತ್ತು ಪ್ರತ್ಯರ್ಜಿದಾರ ಸಂ.1 ಅವರ ಪರವಾಗಿ ಮಾನ್ಯ ವಕೀಲರ ವಾದವನ್ನು ಆಲಿಸಿದ್ದೇವೆ. ವಾದದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಅದೇ ತರಹದ ಅಪೀಲಿನ ಬಗೆಗೆ ಮತ್ತು ವಿಷಯದ ಗುಣಾರ್ಹತೆಯ ಬಗೆಗೂ ಅದು ನಿರ್ಣಯಿಸಿದ ನಿರ್ಣಯಗಳನ್ನು ನಮ್ಮ ಗಮನಕ್ಕೆ ತಂದಿರುತ್ತಾರೆ.

3. ಅನುಕೂಲಕರ ಉದ್ದೇಶಕ್ಕಾಗಿ, ಪಕ್ಷಕಾರರು ವಿಚಾರಣಾಧೀನ ನ್ಯಾಯಾಲಯದ ಮುಂದೆ ಇದ್ದಂತೆ ಅವರನ್ನು ಉಲ್ಲೇಖಿಸಲಾಗಿದೆ.

4. ಅಪೀಲುದಾರರು–ವಾದಿಗಳು, ಇಲ್ಲಿನ ಪ್ರತಿವಾದಿ–ಪ್ರತ್ಯರ್ಜಿದಾರ ಸಂ.1 ಇವರಿಂದ 20.89 ಲಕ್ಷ ರೂ.ಗಳ ಮೊತ್ತವನ್ನು ಬಡ್ಡಿಯೊಂದಿಗೆ ವಸೂಲಿ ಮಾಡಿಕೊಳ್ಳುವುದಕ್ಕಾಗಿ ಮೂಲ ದಾವೆ ಸಂಖ್ಯೆ: 65/2011ರಲ್ಲಿ ದಾವೆಯನ್ನು ಹೂಡಿರುವರು. ದಾವೆಯಲ್ಲಿ ಪ್ರತಿವಾದಿಗಳು ದಿನಾಂಕ: 7.10.1996 ರಿಂದ 13.9.1998ರ ಕಾಲಾವಧಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್, ಐಪಿಸಿ ವಿಭಾಗ, ನಂ.4, ಹುಮನಾಬಾದ್ ಇಲ್ಲಿ ಕೆಲಸ ನಿರ್ವಹಿಸಿರುವರು. ಸದರಿ ಅವಧಿಯಲ್ಲಿ, ಪ್ರತಿವಾದಿಗಳು ಕಾನೂನಿಗೆ ಅನುಸಾರವಾಗಿ ಅವರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿರುವರು ಎಂಬುದು ವಾದಿಗಳ ಆರೋಪವಾಗಿದೆ. ಪ್ರತಿವಾದಿಗಳು ಭಾಲಕಿನಾಲಾ ಯೋಜನೆಯ ಉದ್ದೇಶಕ್ಕಾಗಿ ಅಗತ್ಯವಾದಂತಹ ಎಂ.ಎಸ್. ಡೈವರಷನ್ ಗೇಟ್ಸ್, ವಿ.ನಾಚ್ಸ್, ಎಂ.ಎಸ್. ಪ್ಲೇಟ್ಸ್, ಎಂ.ಇ. ಔಟ್‌ಲೆಟ್ ಗೇಟ್ಸ್, ಸ್ಪಂಜ್ ರಬ್ಬರ್, ಮೈಕ್ರೋ ಪಾಲಿಥಿನ್ ಶೀಟ್ಸ್ ಮತ್ತು ಹ್ಯಾಂಡ್ ಗ್ಲೌಸ್ ಇತ್ಯಾದಿ ಸಾಮಗ್ರಿಗಳನ್ನು ಖರೀದಿಸುವುದಕ್ಕೆ ಹೊಣೆಗಾರರಾಗಿರುತ್ತಾರೆ. ಪ್ರತಿವಾದಿಯು, ಖರೀದಿಸುವ ಸಾಮಗ್ರಿಗಳ ದರವನ್ನು ಎಸ್‌ಪಿಡಿ ಅಥವಾ ಕೆಎಸ್‌ಐಎಂಸಿಗೆ ಉಲ್ಲೇಖಿಸದೆ ಅಗತ್ಯಪಡಿಸಿದ ವಾಸ್ತವಿಕ ದರಕ್ಕಿಂತ ದುಬಾರಿ ದರಗಳನ್ನು ಉಲ್ಲೇಖಿಸಿ ಈ ಮೇಲಿನ ಸಾಮಗ್ರಿಗಳನ್ನು ಖರೀದಿಸಿರುವರು. ಪ್ರತಿವಾದಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ

ತಮ್ಮ ನಿರ್ಲಕ್ಷತೆಯ ಕಾರಣದಿಂದ ಸರ್ಕಾರಕ್ಕೆ ಸುಮಾರು 20.89 ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಉಂಟು ಮಾಡಿರುವರೆಂಬುದು ವಾದಿಗಳ ಮುಖ್ಯ ಆರೋಪವಾಗಿದೆ. ಅಲ್ಲದೆ ಪ್ರತಿವಾದಿಯು, ಅಧೀನ ಅಧಿಕಾರಿಗಳಿಂದಲೂ ಯಾವುದೇ ಕೋರಿಕೆ ಪತ್ರವನ್ನು ಪಡೆದುಕೊಳ್ಳದೆ ಸಾಮಗ್ರಿಗಳನ್ನು ಖರೀದಿಸಲು ಆದೇಶ ಹೊರಡಿಸಿರುವರು ಎಂದು ಸಹ ಆರೋಪಿಸಲಾಗಿದೆ. ಪ್ರತಿವಾದಿಯು, ಖರೀದಿ ಆದೇಶವನ್ನು ಸಕ್ಷಮ ಪ್ರಾಧಿಕಾರದ ಮುಂದೆ ಮಂಡಿಸಿರುವುದಿಲ್ಲ ಹಾಗೂ ಅದರ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಪ್ರತಿವಾದಿಯು, ನಡತೆ, ನಿಯಮಗಳನ್ನು, ದಾಸ್ತಾನು ಕೈಪಿಡಿಯ ನಿಯಮಗಳನ್ನು ಮತ್ತು ಇಲಾಖಾ ಕಾರ್ಯವಿಧಾನಗಳನ್ನು ಉಲ್ಲಂಘಿಸಿದ್ದಾರೆ ಎಂದು ಪ್ರತಿವಾದಿಯ ಮೇಲೆ ಮಾಡಿರುವ ಪ್ರಮುಖ ಆರೋಪಗಳಾಗಿವೆ. ಅಷ್ಟೇ ಅಲ್ಲದೆ, ವಾದಿ ಸಂ.2 ಮತ್ತು 3 ಇವರು ಸದರಿ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಕೋರಿರುತ್ತಾರೆ. ದಿನಾಂಕ:27.8.2010ರಂದು ಪ್ರತಿವಾದಿಯು, ಅವರ ಕೋರಿಕೆಯನ್ನು ನಿರಾಕರಿಸಿರುತ್ತಾರೆ. ಆ ದಿನಾಂಕದಿಂದಲೇ ಸದರಿ ಮೊತ್ತವನ್ನು ವಾರ್ಷಿಕ ಶೇ.18ರಷ್ಟು ಬಡ್ಡಿಯೊಂದಿಗೆ ವಸೂಲಿ ಮಾಡುವುದಕ್ಕಾಗಿ ದಾವೆಯನ್ನು ಹೂಡಲಾಗಿರುತ್ತದೆ.

5. ಪ್ರತಿವಾದಿಯು, ಸಮನ್ಸ್‌ಗಳನ್ನು ಸ್ವೀಕರಿಸಿದ ನಂತರ ಹಾಜರಾಗಿರುವರು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ VIIನೇ ಕ್ರಮಾದೇಶದ 11(ಡಿ) ನಿಯಮದ ಅಡಿಯಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿ, ವಾದಪತ್ರವನ್ನು ತಿರಸ್ಕರಿಸಲು ಕೋರಿರುವರು. ದಿನಾಂಕ: 31.07.2001ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತೇನೆಂದು, ನಿವೃತ್ತಿಯ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಯೊಳಗಾಗಿ ಸರ್ಕಾರವು ತನ್ನ ಮೇಲೆ ಯಾವುದೇ ಇಲಾಖಾ ತನಿಖೆಯನ್ನಾಗಲೀ ಅಥವಾ ನ್ಯಾಯಿಕ ವ್ಯವಹಾರಗಳಾಗಲೀ ನಡೆಸಲು ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ ಎಂದು ಸಮರ್ಥನೆಯನ್ನು ನೀಡುತ್ತಾ ಯಾವುದೇ ಕಾರಣಕ್ಕೂ ಸದರಿ ಮೊತ್ತವನ್ನು ಸಂದಾಯ ಮಾಡಲು ಸಾಧ್ಯವಿಲ್ಲವೆಂದು ರಿಟ್ ಅರ್ಜಿಯಲ್ಲಿ ತಿಳಿಸಿರುತ್ತಾರೆ. ರಿಟ್ ಅರ್ಜಿಯಲ್ಲಿ ಪ್ರತಿವಾದಿಗಳು ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು (ಸಂಕ್ಷಿಪ್ತವಾಗಿ ಕೆಸಿಎಸ್‌ಆರ್)ದ 214(3) ನಿಯಮದೊಂದಿಗೆ 214(6)(ಬಿ)(ii) ಅನ್ನು ಓದಿಕೊಳ್ಳುವುದರೊಂದಿಗೆ, ಸೇವೆಯಲ್ಲಿರುವ ಸರ್ಕಾರಿ ನೌಕರನ ಮೇಲೆ

ಯಾವುದೇ ತನಿಖೆಯನ್ನು ಪ್ರಾರಂಭ ಮಾಡಲು ವ್ಯವಹರಣೆಗಳನ್ನು ಮಾಡದಿರುವಾಗ ಅವರ ವಯೋನಿವೃತ್ತಿಯ ಮುಂಚೆಯಾಗಲೀ ಅಥವಾ ಅವನು ಮರು ನೇಮಕಗೊಂಡ ಅವಧಿಯಲ್ಲಾಗಲೀ ಸದರಿ ವ್ಯವಹರಣೆಗಳು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ವಾದಿಸಿದ್ದಾರೆ.

6. ವಾದಿಗಳು ಸದರಿ ಅರ್ಜಿಯನ್ನು ಪ್ರತಿರೋಧಿಸುತ್ತಾ, ಕೆಸಿಎಸ್ಆರ್‌ನ 214(3)ನೇ ನಿಯಮವು ಸೇವಾ ಷರತ್ತುಗಳ ಬಗೆಗೆ ವ್ಯವಹರಿಸುತ್ತದೆಯೆ ಹೊರತು ಮತ್ತು ನೌಕರರು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ಆಗಬಹುದಾದ ನಷ್ಟವನ್ನು ವಸೂಲಿ ಮಾಡಲು ಸಂಬಂಧಪಟ್ಟಂತೆ ವ್ಯವಹರಿಸುವುದಿಲ್ಲವೆಂದು ವಾದಿಸಿದ್ದಾರೆ. ಈ ದಾವೆಯು ಸಿವಿಲ್ ಸ್ವರೂಪದ ವಾದಾಂಶವನ್ನು ಹೊಂದಿದೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ (ಸಿಪಿಸಿ)ಯ ಉಪಬಂಧಗಳು ಈ ದಾವೆಗೆ ಅನ್ವಯವಾಗುತ್ತದೆ. ಮುಂದುವರೆದು ದಾವೆಯ ವಾದಾಂಶದಲ್ಲಿ ರಾಜ್ಯಕ್ಕಾಗಿ ಕಾಲಪರಿಮಿತಿಯ ಅವಧಿಯು ಕಾಲ ಪರಿಮಿತಿ ಪ್ರತಿಷೇಧಿತವಾಗಿರುವುದಿಲ್ಲ. ಅದರಲ್ಲಿ ಮೊತ್ತವನ್ನು ವಸೂಲಿ ಮಾಡುವುದಕ್ಕಾಗಿ ದಾವೆಯನ್ನು ಮೂವತ್ತು ವರ್ಷಗಳಲ್ಲಿ ಹೂಡುವುದಕ್ಕೆ ಪ್ರತಿಷೇಧವಿರುವುದಿಲ್ಲ ಎಂದು ನಿರೂಪಿಸಲಾಗಿದೆಯೆಂದು ವಾದಿಸಿದ್ದಾರೆ.

7. ಈ ವಾದಗಳ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯ ಅದು ಪರಿಗಣನೆಗೆ ತೆಗೆದುಕೊಳ್ಳುವುದಕ್ಕಾಗಿ ಈ ಮುಂದಿನ ಅಂಶಗಳನ್ನು ಎತ್ತಿದೆ.

> *1. ವಾದಿಗಳು ದಾವೆಯನ್ನು ಕಾಲ ಪರಿಮಿತಿಯ ಅವಧಿಯೊಳಗಾಗಿ ಹೂಡಿರುವರೇ?*
>
> *2. ವಾದಿಗಳು ದಾಖಲಿಸಿದ ವಾದವನ್ನು ನಿರಾಕರಿಸುವುದನ್ನು ಪ್ರತಿವಾದಿಯು ಸಿಪಿಸಿಯ 11(ಡಿ) ನಿಯಮದ ಅಡಿಯಲ್ಲಿ ಅಗತ್ಯಪಡಿಸಿದ ಕಾರಣಗಳು ಸೂಕ್ತವಾದ ಮತ್ತು ಯುಕ್ತವಾದ ರೀತಿಯಲ್ಲಿ ಮಂಡಿಸಿರುವರೇ?*

8. ಇಬ್ಬರೂ ಪಕ್ಷಕಾರರ ವಾದವನ್ನು ಆಲಿಸಿದ ನಂತರ, ವಿಚಾರಣಾ ನ್ಯಾಯಾಲಯ ಎರಡು ವಾದಾಂಶಗಳ ಬಗ್ಗೆ ಸಕಾರಾತ್ಮಕವಾಗಿಯೇ ಉತ್ತರಿಸಿದೆ ಮತ್ತು ತದನಂತರದಲ್ಲಿ, ವಾದಿಗಳು ದಾಖಲಿಸಿದ ವಾದ ಪತ್ರವನ್ನು ನಿರಾಕರಿಸುವ ಮೂಲಕ ಪ್ರಶ್ನಿತ ಆದೇಶವನ್ನು ಹೊರಡಿಸಿದೆ.

9. ನಾವು, ಅಪೀಲುದಾರರ ಪರವಾಗಿ ವಾದ ಮಂಡಿಸಿದ ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್ ಮತ್ತು ಪ್ರತ್ಯರ್ಜಿದಾರ ಸಂ.1ರ ಪರವಾಗಿ ವಾದ ಮಂಡಿಸಿದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ್ದೇವೆ ಮತ್ತು ಮಂಡಿಸಿದ ದಾಖಲೆಗಳನ್ನು ಅವಲೋಕಿಸಿದ್ದೇವೆ. ಪರಿಗಣನೆಗೆ ತೆಗೆದುಕೊಳ್ಳುವುದಕ್ಕಾಗಿ ಉದ್ಭವಿಸಿದ ಅಂಶಗಳು ಈ ಕೆಳಗಿನಂತಿದೆ:

> *1. ಕೆಸಿಎಸ್‌ಆರ್‌ನ 214(3) ನಿಯಮದ ಅಡಿಯಲ್ಲಿನ ಉದ್ದೇಶಿತ ಪ್ರತಿಷೇಧ ಅಭಿಪ್ರಾಯದಂತೆ ದಾವೆಯು ಊರ್ಜಿತವಾಗಿದೆಯೇ?*
>
> *2. ವಿಚಾರಣಾ ನ್ಯಾಯಾಲಯ ವಾದಪತ್ರವನ್ನು ಅರ್ಜಿಯನ್ನು ತಿರಸ್ಕರಿಸಿರುವುದು ಸರಿಯಾದುದುದೇ?*
>
> *3. ಈ ಅಪೀಲಿನಲ್ಲಿ ಹಸ್ತಕ್ಷೇಪ ಮಾಡುವುದಕ್ಕಾಗಿ ಪ್ರಶ್ನಿತ ಆದೇಶವು ಯಾವುದೇ ಅಕ್ರಮತೆ ಅಥವಾ ಕಾನೂನುಬಾಹಿರತೆಯಿಂದ ಕೂಡಿದೆಯೇ?*

10. ಪ್ರತಿವಾದಿಯಾಗಿರುವ ಶ್ರೀ ವಿ.ಹೆಚ್. ಆಗರ್‌ಖೇಡ ಅವರು ದಿನಾಂಕ: 07.10.1996 ರಿಂದ 13.9.1998ರ ಅವಧಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್, ಐಪಿಸಿ ವಿಭಾಗ, ಸಂ.4, ಹುಮ್ನಾಬಾದ್‌ನಲ್ಲಿ ಕೆಲಸನಿರ್ವಹಿಸುತ್ತಿದ್ದರೆಂಬುದರಲ್ಲಿ ಯಾವುದೇ ವಿವಾದವು ಇರುವುದಿಲ್ಲ. ಅವರು ದಿನಾಂಕ: 31.07.2001ರಂದು

ಅಧೀಕ್ಷಕ ಇಂಜಿನಿಯರ್ ಆಗಿ ವಯೋನಿವೃತ್ತಿ ಹೊಂದಿದ್ದಾರೆ ಎಂಬ ಬಗ್ಗೆ ಸಹ ಯಾವುದೇ ವಿವಾದ ಇರುವುದಿಲ್ಲ. ಅಲ್ಲದೇ, ಅವರು ನಿವೃತ್ತಿ ಹೊಂದಿದ ತರುವಾಯ 2011ನೇ ವರ್ಷದಲ್ಲಿ ದಾವೆಯನ್ನು ದಾಖಲಿಸಿರುವ ಬಗ್ಗೆ ಸಹ ಯಾವುದೇ ವಿವಾದ ಇರುವುದಿಲ್ಲ.

11. ಅಪೀಲುದಾರರು ಪ್ರಥಮವಾಗಿ ಮತ್ತು ಅತಿ ಮುಖ್ಯವಾಗಿ ಎತ್ತಿರುವ ವಾದಾಂಶವೆಂದರೆ, ವಿಚಾರಣಾ ನ್ಯಾಯಾಲಯವು ಕೆಸಿಎಸ್ಆರ್‌ನ 214(3) ನಿಯಮದ ಸದರಿ ಉಪಬಂಧಗಳು ಹಣದ ವಸೂಲಾತಿಗಾಗಿ ಹೂಡುವ ದಾವೆಗೆ ಅನ್ವಯವಾಗುವುದಿಲ್ಲ ಎಂದು ತಪ್ಪಾಗಿ ಅರ್ಥೈಸಿದೆ ಎಂಬುದಾಗಿದೆ. ಅಪೀಲುದಾರ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರು ಕಾಲ ಪರಿಮಿತಿ ಅಧಿನಿಯಮ (ಸಂಕ್ಷಿಪ್ತವಾಗಿ ಅಧಿನಿಯಮ)ದ 112ನೇ ಅನುಚ್ಛೇದದಲ್ಲಿ ನಿರೂಪಿಸಿದ ವಾದಾಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ಅದರಲ್ಲಿ ಸರ್ಕಾರವು ದಾವೆಯನ್ನು ದಾಖಲಿಸುವಾಗ ಮೂವತ್ತು ವರ್ಷಗಳ ಕಾಲ ಪರಿಮಿತಿ ಅವಧಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕೆಸಿಎಸ್ಆರ್‌ನ 214(3)ನೇ ನಿಯಮವನ್ನು ಅನ್ವಯಿಸಬಾರದು, ಹಾಗಾಗಿ, ಪ್ರಶ್ನಿತ ಆದೇಶವು ಕಾನೂನಿನಲ್ಲಿ ಸಮರ್ಥನೀಯವಾಗಿಲ್ಲವೆಂದು ವಾದವನ್ನು ಮಂಡಿಸಿರುವರು.

12. ಈ ಉದ್ದೇಶಕ್ಕಾಗಿ ಇಲ್ಲಿ ಕೆಸಿಎಸ್ಆರ್‌ನ 214(3)ನೇ ನಿಯಮವನ್ನು ಉಲ್ಲೇಖಿಸಲಾಗಿದೆ, ಅದು ಈ ಕೆಳಗಿನಂತಿದೆ:–

> ‘(3) ಯಾವ ನ್ಯಾಯಾಂಗ ವಿಚಾರಣೆಗಳನ್ನೂ, ಸರ್ಕಾರಿ ನೌಕರನ ನಿವೃತ್ತಿಗೆ ಮುಂಚೆಯಾಗಲೀ ಅಥವಾ ಅವನು ಮರು ನೇಮಕಗೊಂಡ ಅವಧಿಯಲ್ಲಾಗಲೀ ಸರ್ಕಾರೀ ನೌಕರನು ಸೇವೆಯಲ್ಲಿದ್ದಾಗ ಹೂಡಿರದಿದ್ದರೆ, ಅಂತಹ ಹೂಡುವುದಕ್ಕೆ ಮುಂಚಿನ ನಾಲ್ಕು ವರ್ಷಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಉದ್ಭವಿಸಿರುವ ವ್ಯಾಜ್ಯಕಾರಣದ ಸಂಬಂಧದಲ್ಲಿ ಅಥವಾ ಸಂಭವಿಸಿರುವ ಕೃತ್ಯದ ಸಂಬಂಧದಲ್ಲಿ ಹೂಡತಕ್ಕದ್ದು.”

\ನಿಯಮ 214 (6)(ಬಿ)(ii) ಈ ಮುಂದಿನಂತಿದೆ:

(ಬಿ) ನ್ಯಾಯಿಕ ವ್ಯವಹರಣೆಗಳನ್ನು,

(i) xxxxx

(ii) ಸಿವಿಲ್ ವ್ಯವಹರಣೆಗಳ ಸಂಬಂಧದಲ್ಲಿ, ವಾದಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಿನಾಂಕದಂದು.

– ಹೂಡಲಾಗಿದೆ ಎಂದು ಭಾವಿಸತಕ್ಕದ್ದು.

ನಾವು, ಕಾಲ ಪರಿಮಿತಿ ಅಧಿನಿಯಮದ 112ನೇ ಅನುಚ್ಛೇದವನ್ನು ಸಹ ಉಲ್ಲೇಖಿಸಿದ್ದೇವೆ, ಅದು ಈ ಕೆಳಗಿನಂತಿದೆ:–

ಭಾಗ–IX ಸಂಕೀರ್ಣ ವಿಷಯಗಳ ಸಂಬಂಧದಲ್ಲಿನ ದಾವೆಗಳು:

| | | |
|---|---|---|
| ಕೇಂದ್ರ ಸರ್ಕಾರ ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸರ್ಕಾರವನ್ನು ಒಳಗೊಂಡು ಯಾವುದೇ ರಾಜ್ಯ ಸರ್ಕಾರದಿಂದ ಅಥವಾ ಅದರ ಪರವಾಗಿ ಹೂಡಲಾದ (ಸರ್ವೋಚ್ಛ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಗೊಳಪಟ್ಟು ಅದರ ಮುಂದಿರುವ ದಾವೆಯನ್ನು ಬಿಟ್ಟು) ಯಾವುದೇ ದಾವೆ. | ಮೂವತ್ತು ವರ್ಷಗಳು | ಈ ಅಧಿನಿಯಮದ ಮೇರೆಗೆ ಒಬ್ಬ ಖಾಸಗಿ ವ್ಯಕ್ತಿಯ ವಿರುದ್ಧ ಕಾಲ ಪರಿಮಿತಿಯ ಅವಧಿಯು ಪ್ರಾರಂಭ ವಾಗುವಂದಿನಿಂದ. |

ಮೇಲೆ ಉಲ್ಲೇಖಿಸಿದ ಕಾನೂನು ಉಪಬಂಧಗಳನ್ನು ಓದಿಕೊಂಡಾಗ, ಸೇವೆಯಲ್ಲಿರುವ ಸರ್ಕಾರಿ ನೌಕರನು ಅವನು ಸೇವೆಯಲ್ಲಿರುವಾಗಲೇ ನ್ಯಾಯಿಕ ವ್ಯವಹರಣೆಗಳ ದಾವೆಯನ್ನು ಹೂಡದಿದ್ದಲ್ಲಿ, ನಿವೃತ್ತಿಯಾಗುವ ಮುಂಚೆಯಾಗಲೀ ಅಥವಾ ಅವನು ಮರುನಿಯೋಜನೆಗೊಂಡ ಅವಧಿಯಲ್ಲಾಗಲೀ ಯಾವುದೇ ವ್ಯಾಜ್ಯದ ಕಾರಣದ ಸಂಬಂಧದಲ್ಲಿ ಅಥವಾ ಅಂಥ ವ್ಯಾಜ್ಯ ಕಾರಣ ಉಂಟಾದ ಸಂಬಂಧದಲ್ಲಿ ಅಂಥ ದಾವೆಯನ್ನು ನಾಲ್ಕು ವರ್ಷಗಳು ಮೀರದಂತೆ ಹೂಡಲು ಬರುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ. ಕೆಸಿಎಸ್‌ಆರ್‌ನ 214(6)(ಬಿ)(ii) ನಿಯಮದ ಪ್ರಕಾರ ವಾದಿಯು ನ್ಯಾಯಾಲಯದಲ್ಲಿ ಮಂಡಿಸಿದ ದಿನಾಂಕದಂದು ಸಿವಿಲ್ ವ್ಯವಹರಣೆಗಳ ಮೊಕದ್ದಮೆಯ ಸಂಬಂಧದಲ್ಲಿ ಹೂಡಿದ ದಾವೆಯನ್ನು ನ್ಯಾಯಿಕ ವ್ಯವಹರಣೆಗಳ ದಾವೆಯೆಂದು ಪರಿಭಾವಿಸತಕ್ಕದ್ದು. ಈ ಪ್ರಸಕ್ತ ಮೊಕದ್ದಮೆಯಲ್ಲಿ, ಪ್ರತಿವಾದಿ ನಿವೃತ್ತಿಯಾಗಿ ಒಂಭತ್ತು ವರ್ಷ ಒಂದು ತಿಂಗಳು ಕಳೆದ ನಂತರದಲ್ಲಿ ಮತ್ತು ದುರುಪಯೋಗದ ಘಟನೆ ನಡೆದು ಹನ್ನೆರಡು ವರ್ಷಗಳು ಕಳೆದ ನಂತರದಲ್ಲಿ ವಾದಿಯು ಈ ಮೊಕದ್ದಮೆಯನ್ನು ದಾಖಲಿಸಿರುವರು. ಆದುದರಿಂದ, ನಾವು, ಕಾಲ ಪರಿಮಿತಿ ಅವಧಿಯನ್ನು ದಿನಾಂಕ: 13.9.1998ರಂದು ಪ್ರಾರಂಭಿಕ ಕಾಲವೆಂದು ಪರಿಗಣಿಸಿದರೆ, ದಾವೆಯು 20.89 ಲಕ್ಷ ರೂ.ಗಳನ್ನು ವಸೂಲಿ ಮಾಡುವುದಕ್ಕಾಗಿ ನ್ಯಾಯಿಕ ವ್ಯವಹರಣೆಗಳ ದಾವೆಯನ್ನು ಹೂಡಿರುವಾಗ, ಕೆಸಿಎಸ್‌ಆರ್‌ನ 214(3) ನಿಯಮದ ಪ್ರಕಾರದಂತೆ ದಿನಾಂಕ: 13.9.1998 ರಿಂದ ನಾಲ್ಕು ವರ್ಷಗಳ ಅವಧಿಯೊಳಗಾಗಿ ವ್ಯಾಜ್ಯದ ದಾವೆಯನ್ನು ಹೂಡಬೇಕಾಗುತ್ತದೆ ಎಂಬ ಅಂಶವನ್ನು ನಾವು ಪರಿಗಣಿಸಬೇಕಾಗುತ್ತದೆ. ಹಾಗಾಗಿ ದಾವೆಯನ್ನು ದಿನಾಂಕ 13.9.2002ರೊಳಗೆ ಸಲ್ಲಿಸಲೇಬೇಕಿರುತ್ತದೆ. ಹೀಗಿರುವಾಗ ದಾವೆಯನ್ನು ದಿನಾಂಕ: 13.9.2011ರಂದು ದಾಖಲಿಸಲಾಗಿರುತ್ತದೆ. ಪ್ರತಿವಾದಿಯೂ ದಿನಾಂಕ: 31.7.2001ರಂದು ನಿವೃತ್ತಿ ಹೊಂದಿರುತ್ತಾನೆ. ದಾವೆಯನ್ನು 2011ರಲ್ಲಿ ಹೂಡಲಾಗಿರುತ್ತದೆ. ಪ್ರತಿವಾದಿಯೂ ನಿವೃತ್ತಿ ಹೊಂದಿದ ಒಂಭತ್ತು ವರ್ಷ ಒಂದು ತಿಂಗಳ ತರುವಾಯದ ನಂತರದಲ್ಲಿ ದಾವೆಯನ್ನು ಹೂಡಲಾಗಿರುತ್ತದೆ. ವಾದಗಳು ನಡೆಯುವ ಸಂದರ್ಭದಲ್ಲಿ ಹೆಚ್ಚುವರಿ ಅಡ್ವೋಕೇಟ್ ಜನರಲ್‌ರವರು ಸದರಿ ಉಪಬಂಧಗಳು ಸೇವಾ ಷರತ್ತುಗಳಿಗೆ ಅನ್ವಯವಾಗುತ್ತದೆಯೇ ಹೊರತು

ನಷ್ಟವನ್ನು ವಸೂಲಿ ಮಾಡುವುದಕ್ಕೆ ಈ ಸದರಿ ಉಪಬಂಧಗಳು ಅನ್ವಯವಾಗುವುದಿಲ್ಲ. ಈ ದಾವೆಯು ಸಿವಿಲ್ ಸ್ವರೂಪದ ದಾವೆಯಾಗಿದ್ದ ಕೆಸಿಎಸ್‌ಆರ್‌ನ 214ನೇ ನಿಯಮದ ಉಪಬಂಧಗಳ ಮುಖಾಂತರ ಹೂಡಲಾಗಿದೆ ಎಂದು ವಾದವನ್ನು ಮಂಡಿಸಿರುವರು. ಇಲ್ಲಿ ಒಬ್ಬ ಸರ್ಕಾರಿ ನೌಕರನು ನಿವೃತ್ತಿಯಾದ ನಾಲ್ಕು ವರ್ಷಗಳ ನಂತರದಲ್ಲಿ ನ್ಯಾಯಿಕ ವ್ಯವಹರಣೆಗಳನ್ನು ಹೂಡಬಾರದೆಂದು ಸ್ಪಷ್ಟವಾಗುತ್ತದೆ. ಕೆಸಿಎಸ್‌ಆರ್‌ನ 214(6)(ಬಿ)(ii)ಯ ನಿಯಮದಲ್ಲಿ ಸಿವಿಲ್ ಸ್ವರೂಪದ ನ್ಯಾಯಿಕ ವ್ಯವಹರಣೆಗಳಿಗೆ ನಿರ್ದಿಷ್ಟವಾಗಿ ಉಲ್ಲೇಖಿಸಿದೆ.

13. ***ಕರ್ನಾಟಕ ರಾಜ್ಯ –ವಿರುದ್ಧ– ಸಂಗಪ್ಪ ಬಿ ಡಿರಾಡ್***[1] ರಲ್ಲಿನ ಮೊಕದ್ದಮೆಯಲ್ಲಿ ವಿಷಯದಲ್ಲಿನ ಈ ಕಾನೂನು ಅಂಶವನ್ನು ಚರ್ಚಿಸಲಾಗಿದೆ. ಈ ನ್ಯಾಯಾಲಯದ ಸಹವರ್ತಿ ಪೀಠದಲ್ಲಿ (ಬಿ.ವಿ. ನಾಗರತ್ನ) ಅವರು ಸಹ ಒಬ್ಬ ಸದಸ್ಯರಾಗಿದ್ದರು. ಈ ಸಹವರ್ತಿ ಪೀಠವು ಅಂಥ ಆ ಯಾವುದೇ ವ್ಯಾಜ್ಯ ದಾವೆ ಹೂಡುವ ಉಪಬಂಧದಲ್ಲಿ ಸರ್ಕಾರಿ ನೌಕರನು ಸೇವೆಯಲ್ಲಿರುವಾಗ ಅಥವಾ ಮರು–ನಿಯೋಜನೆಯ ಅವಧಿಯಲ್ಲಿ ಕೆಸಿಎಸ್‌ಆರ್‌ನ 214(3) ನಿಯಮದ ನಿಬಂಧನೆಗಳ ಪ್ರಕಾರ ದಾವೆಯನ್ನು ಹೂಡಲು ಸಾಧ್ಯವಿಲ್ಲ ಅಥವಾ ಸರ್ಕಾರಿ ನೌಕರನು ನಿವೃತ್ತಿಯಾದ ನಾಲ್ಕು ವರ್ಷದ ನಂತರದಲ್ಲಿ ಅಂತಹ ಯಾವುದೇ ದಾವೆಯನ್ನು ಹೂಡಲು ಬರುವುದಿಲ್ಲ ಎಂದು ನಿರ್ಣಯಿಸಿದೆ. ಈ ಕಾನೂನು ಪ್ರಸ್ತಾಪಗಳನ್ನು ***ಬಿ.ವಿ. ಸಾವಂದಶೆಟ್ಟಿ –ವಿರುದ್ಧ– ಮೈಸೂರು ರಾಜ್ಯ***[2], ಮೊಕದ್ದಮೆಯಲ್ಲಿ ಸಹ ಪರಿಭಾಷಿಸಲಾಗಿದೆ, ಅದು ಈ ಕೆಳಗಿನಂತಿದೆ:–

> *"ನಿಯಮ 214(ಬಿ)(ii) – ಯಾವುದೇ ಘಟನೆ ನಡೆದ ನಾಲ್ಕು ವರ್ಷದ ನಂತರದಲ್ಲಿ ದಾವೆಯನ್ನು ಹೂಡತಕ್ಕದ್ದಲ್ಲ ಮತ್ತು ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ. 214ನೇ ನಿಯಮವು ವ್ಯವಹರಣೆಗಳನ್ನು ಅಧಿಕೃತವಾಗಿ ಪ್ರಾರಂಭಿಸುವ ಸಂಬಂಧದಲ್ಲಿ*

1. ಉಲ್ಲೇಖ ಸಂ.200057/2016
2. 1973 ಮೈಸೂರು ಕಾನೂನು ಜನರಲ್ 41 ಎಸ್.ಎನ್. ಬಾಬ್ತು ಸಂ.87

*ಸದರಿ ನಿಯಮದ ಪರಂತುಕದಲ್ಲಿ ಈ ವಿಷಯವಾಗಿ ಷರತ್ತುಗಳನ್ನು ನಿರೂಪಿಸಿದೆ. ಆ ಷರತ್ತಿನಲ್ಲಿ ಒಂದೆಂದರೆ ಯಾವುದೇ ಅಂಥ ದಾವೆಯನ್ನು 4 ವರ್ಷಗಳು ಮೀರಿದ ತರುವಾಯ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ, ದಾವೆಯನ್ನು ಹೂಡತಕ್ಕದ್ದಲ್ಲ ಎಂದು ನಿರೂಪಿಸಿದೆ. ಸರ್ಕಾರದ ವ್ಯವಹರಣೆಗಳು, 1965ರ ಮೇ ತಿಂಗಳಿಗೆ ಸಂಬಂಧಿಸಿದಂತೆ ದುರ್ನಡತೆಯ ಆರೋಪವು ಕಂಡು ಬಂದಿರುತ್ತದೆ. ಅರ್ಜಿದಾರರು ಈ ವ್ಯವಹರಣೆಗಳನ್ನು ಹೂಡುವ ಮುಂಚೆ ಘಟನೆಯು ನಾಲ್ಕು ವರ್ಷಗಳಿಗಿಂತ ಮುಂಚಿತವಾಗಿ ನಡೆದಿದೆ ಎಂದು ಸಲ್ಲಿಸಿದ ಅಫಿಡವಿಟ್‌ನ 3ನೇ ಕಂಡಿಕೆಯಲ್ಲಿ ನಿರ್ದಿಷ್ಟವಾಗಿ ದೃಢವಾಗಿ ನಿರೂಪಿಸಿರುವುದು ವಿವಾದಿತವಲ್ಲ. ಆದುದರಿಂದ, ಸರ್ಕಾರ ಎಂ.ಸಿ.ಎಸ್. ನಿಯಮಗಳ 214ನೇ ನಿಯಮದ ಅಡಿಯಲ್ಲಿನ ತನ್ನ ಅಧಿಕಾರವನ್ನು ಚಲಾಯಿಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ ಎಂದು ಸ್ಪಷ್ಟವಾಗಿ ನಿರ್ಣಯಿಸಿದೆ."*

14. ದಾವೆಗಳಿಗೆ 214ನೇ ನಿಯಮವನ್ನು ಅನ್ವಯಿಸಿಕೊಳ್ಳುವ ಸಂಬಂಧದಲ್ಲಿ ನಿರ್ದಿಷ್ಟ ಉಲ್ಲೇಖಗಳನ್ನು ಇಲ್ಲಿ ಉಲ್ಲೇಖಿಸಿರುವಾಗ, ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರು, ಅಂಥ ಸನ್ನಿವೇಶಗಳಲ್ಲಿ ಅಧಿನಿಯಮದ 112ನೇ ಅನುಚ್ಛೇಧವನ್ನು ಅನ್ವಯಿಸಿಕೊಳ್ಳಲು ಕೋರಿರುವುದನ್ನು ಅಂಗೀಕರಿಸಲು ಸಾಧ್ಯವಿಲ್ಲ.

15. ಮುಂದುವರೆದು, ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರು, ಅಧಿನಿಯಮದ 112ನೇ ಅನುಚ್ಛೇಧವನ್ನು ಉಲ್ಲೇಖಿಸಿ, ಹಣವನ್ನು ವಸೂಲಿ ಮಾಡುವ ಸಂಬಂಧದಲ್ಲಿನ ದಾವೆಗಳ ಮೊಕದ್ದಮೆಯ ಸಂದರ್ಭದಲ್ಲಿ ಕಾಲ ಪರಿಮಿತಿ ಅವಧಿಯು ಮೂವತ್ತು ವರ್ಷಗಳು ಆಗಿರುತ್ತದೆ ಎಂದು ವಾದಾಂಶದಲ್ಲಿ ನಿರೂಪಿಸಿರುವರು ಮತ್ತು ಈ ಮೊಕದ್ದಮೆಗೆ ಕೆಸಿಎಸ್‌ಆರ್‌ನ 214ನೇ ನಿಯಮದ ಉಪಬಂಧಗಳು ಅನ್ವಯವಾಗುವುದಿಲ್ಲ ಎಂದು ಸಹ ವಾದದಲ್ಲಿ ನಿರೂಪಿಸಿರುವರು.

ಅಧಿನಿಯಮದ ಸದರಿ 112ನೇ ಅನುಚ್ಛೇಧವನ್ನು ಸದರಿ ಅಧಿನಿಯಮದ 29(2)ನೇ ಪ್ರಕರಣವನ್ನು ಸಹ ಓದಿಕೊಳ್ಳಬೇಕೆಂದು ನಿವೇದಿಸಿರುವರು. ಅಧಿನಿಯಮದ 29(2)ನೇ ಪ್ರಕರಣವು ಈ ಕೆಳಗಿನಂತಿದೆ:–

*"29.(1) xxx xxx xxx xxx xxx.*

*(2) ಯಾವುದೇ ದಾವೆ, ಅಪೀಲು ಅಥವಾ ಆವೇದನ ಪತ್ರದ ಬಗ್ಗೆ ಅನುಸೂಚಿಯಿಂದ ನಿಯಮಿಸಲಾದ ಕಾಲ ಪರಿಮಿತಿಯ ಅವಧಿಗಿಂತ ಬೇರೆಯಾದ ಅವಧಿಯನ್ನು ಯಾವುದೇ ವಿಶೇಷ ಅಥವಾ ಸ್ಥಳೀಯ ಕಾನೂನು ನಿಯಮಿಸಿರುವಲ್ಲಿ, ಅಂಥ ಅವಧಿಯು, ಅನುಸೂಚಿಯು ನಿಯಮಿಸಿದ ಅವಧಿ ಎಂಬಂತೆಯೇ 3ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದು ಮತ್ತು ಯಾವುದೇ ದಾವೆ, ಅಪೀಲು ಅಥವಾ ಆವೇದನ ಪತ್ರದ ಬಗ್ಗೆ ಯಾವುದೇ ವಿಶೇಷ ಅಥವಾ ಸ್ಥಳೀಯ ಕಾನೂನು ನಿಯಮಿಸಿದ ಯಾವುದೇ ಕಾಲ ಪರಿಮಿತಿಯ ಅವಧಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ, 4 ರಿಂದ 24 (ಎರಡೂ ಸೇರಿ)ನೇ ಪ್ರಕರಣಗಳಲ್ಲಿರುವ ಉಪಬಂಧಗಳು, ಅವು ಅಂಥ ವಿಶೇಷ ಅಥವಾ ಸ್ಥಳೀಯ ಕಾನೂನಿನಿಂದ ವ್ಯಕ್ತವಾಗಿ ಹೊರತುಪಡಿಸಿರುವಷ್ಟರ ಮಟ್ಟಿಗೆ ಮತ್ತು ಅಲ್ಲಿಯವರೆಗೆ ಅನ್ವಯವಾಗತಕ್ಕದು.*

16. ಮೇಲಿನ ಕಾನೂನು ಉಪಬಂಧವನ್ನು ಮತ್ತು ಅಧಿನಿಯಮದ 112ನೇ ಅನುಚ್ಛೇಧವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ವಿಶೇಷ ಅಥವಾ ಸ್ಥಳೀಯ ಕಾನೂನು ವಿಭಿನ್ನ ಕಾಲಾವಧಿಯನ್ನು ನಿಗದಿಪಡಿಸಿರುವುದು ಸ್ಪಷ್ಟವಾಗಿದೆ. ಅಧಿನಿಯಮಕ್ಕೆ ಅಂಥ ವಿಶೇಷ ಅಥವಾ ಸ್ಥಳೀಯ ಕಾನೂನಿನಲ್ಲಿ ಅನ್ಯಥಾ ವ್ಯಕ್ತಪಡಿಸದ ಹೊರತು ಅನುಸೂಚಿಯಲ್ಲಿ ಪ್ರಕರಣಗಳಲ್ಲಿ ಅಥವಾ ಅನುಚ್ಛೇದಗಳಲ್ಲಿ ಮಂಡಿಸಿದ ಕಾಲಾವಧಿಗೆ ಆದ್ಯತೆಯಲ್ಲಿ ಮಾತ್ರವೇ ಅನ್ವಯಿಸಕೊಳ್ಳಬೇಕು.

ಈ ಪ್ರಸ್ತಾವಿತ ಕಾನೂನನ್ನು ***ರಾಜ್ಯ ಕಾರ್ಯದರ್ಶಿ –ವಿರುದ್ಧ– ಕರಾಚಿ ಪುರಸಭೆ***[3] ಮೊಕದ್ದಮೆಯಲ್ಲೂ ಸಹ ಮಂಡಿಸಲಾಗಿದೆ. ಮೇಲಿನ ಮೊಕದ್ದಮೆಯಲ್ಲಿ ವಿದ್ಯುಕ್ತವಾಗಿ ಹೇಳಿಕೆಯೂ ಮಂಡಿತವಾಗುವ ಮುಖಾಂತರ ಅದು ಕಾಲ ಪರಿಮಿತಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾದ ವಿಶೇಷ ಅಥವಾ ಸ್ಥಳೀಯ ಕಾನೂನಿನ ಮೂಲಕ ನಿಗದಿಯಾದ ಕಾಲ ಪರಿಮಿತಿಯ ಕಾಲಾವಧಿಯನ್ನು ಅದು ಸ್ಪಷ್ಟಗೊಳಿಸುತ್ತದೆ. ಕಾಲ ಪರಿಮಿತಿಯ ಮೇಲಿನ ಸಾಮಾನ್ಯ ಕಾನೂನಾದ ಅಧಿನಿಯಮದಲ್ಲಿ ವಿಶೇಷ ನಿಯಮಗಳಾಗಿ ಕೆಸಿಎಸ್‌ಆರ್ ನಿಯಮಗಳು ಅಂಗೀಕೃತವಾಗಿದೆ ಮತ್ತು ಕಾಲ ಪರಿಮಿತಿಯ ಹಿನ್ನೆಲೆಯಲ್ಲಿ ನೌಕರನ ಮೂಲಕ ಉಂಟಾದ ನಷ್ಟವನ್ನು ವಸೂಲಿ ಮಾಡುವುದಕ್ಕಾಗಿ ಆ ನೌಕರನು ತನ್ನ ಹುದ್ದೆಯಿಂದ ನಿವೃತ್ತನಾದ ನಾಲ್ಕು ವರ್ಷಗಳೊಳಗಾಗಿ ವಿಚಾರಣೆ ಮಾಡಬೇಕಾದ ಕಾಲ ಪರಿಮಿತಿ ಇರುವುದು ಈ ನಿಯಮಗಳಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಈ ಮೊಕದ್ದಮೆಯಲ್ಲಿ ದಾವೆಯನ್ನು ಒಂಭತ್ತು ವರ್ಷಗಳು ಮತ್ತು ಒಂದು ತಿಂಗಳ ತರುವಾಯ ವಿಳಂಬವಾಗಿ ಹೂಡಲಾಗಿರುವುದನ್ನು ಅಂಗೀಕರಿಸಲಾಗಿದೆ. ಆದುದರಿಂದ ದಾವೆಯಲ್ಲಿ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರು ಎತ್ತಿರುವ ವಾದಾಂಶವನ್ನು ಸ್ವೀಕರಿಸಲು ಸಾಧ್ಯವಿಲ್ಲ. ಕಾನೂನಿನ ತತ್ವವು ಕಾಲ ಪರಿಮಿತಿಯ ಅವಧಿಯು ಒಂದು ಭಾರಿ ಪ್ರಾರಂಭವಾದರೆ ಅದು ಹಾಗೆಯೇ ಮುಂದುವರೆಯುತ್ತದೆ, ಅದೂ ಯಾವತ್ತು ಕೊನೆಗೊಳ್ಳುವುದಿಲ್ಲ ಎಂಬುದು ಸಹ ಸುಸ್ಥಾಪಿತವಾಗಿದೆ. ಆದರೆ ಈ ಕಾಲ ಪರಿಮಿತಿ ಅವಧಿಯನ್ನು ತರುವಾಯದಲ್ಲಿ ಅಧಿನಿಯಮದ ಅಡಿಯಲ್ಲಿ ಗೊತ್ತುಪಡಿಸಿದ ಅವಧಿಗೆ ಮಾತ್ರವೇ ಪ್ರಾಪ್ತಗೊಳಿಸಬಹುದಾಗಿದೆ. ಮೇಲಿನ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರಣಾ ನ್ಯಾಯಾಲಯವು ಮೊಕದ್ದಮೆಯ ಸಂಗತಿಗಳಿಗೆ ಕೆಸಿಎಸ್‌ಆರ್‌ನ 214ನೇ ನಿಯಮದ ಉಪಬಂಧಗಳನ್ನು ಅನ್ವಯಿಸಿಕೊಂಡಿರುವುದು ಸರಿಯಾದ ಕ್ರಮವಾಗಿದೆ. ಅದರಂತೆಯೇ ಅದು ನೀಡಿದ ನಿರ್ಣಯವು ಸರಿಯಾದುದಾಗಿದೆ.

17. ನಂತರದಲ್ಲಿ, ಹೊರಡಿಸಿದ ಪ್ರಶ್ನಿತ ಆದೇಶದ ಮೇಲೆ ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರು ಎತ್ತಿರುವ ವಾದಾಂಶಗಳಿಗೆ ವಿಚಾರಣಾ ನ್ಯಾಯಾಲಯ

3. ಎಪಿಆರ್ 1931 ಎಸ್‌ಐಎನ್‌ಡಿ 55

ಎತ್ತಿದ ಎಲ್ಲ ವಿವಾದಾಂಶಗಳಿಗೂ ಮತ್ತು ಆಪಾದಿಸಿದ ಅಕ್ರಮತೆಯ ಬಗೆಗೆ ಉತ್ತರಿಸಿರುವುದಿಲ್ಲ. ಅದು ಪ್ರಶ್ನಿತ ಆದೇಶವನ್ನು ಮಾತ್ರವೇ ಹೊರಡಿಸಿರುತ್ತದೆ. ಎತ್ತಿದ ವಾದಾಂಶಗಳನ್ನು ಉತ್ತರಿಸುವ ಉದ್ದೇಶಕ್ಕಾಗಿ, ನಾವು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ VIIರ 11ನೇ ನಿಯಮವನ್ನು ಉಲ್ಲೇಖಿಸಿದ್ದೇವೆ. ಅದು ಈ ಮುಂದಿನಂತಿದೆ:–

> 11. ವಾದಪತ್ರವನ್ನು ತಿರಸ್ಕರಿಸುವುದು:– ಕೆಳಕಂಡ ಸಂದರ್ಭಗಳಲ್ಲಿ ವಾದ ಪತ್ರವನ್ನು ತಿರಸ್ಕರಿಸತಕ್ಕುದು:–
>
> (ಎ) ಅದರಲ್ಲಿ ವ್ಯಾಜ್ಯ ಕಾರಣವನ್ನು ತಿಳಿಸದಿರುವಲ್ಲಿ;
>
> (ಬಿ) ಕೇಳಲಾದ ಪರಿಹಾರದ ಮೌಲ್ಯವನ್ನು ಕಡಿಮೆಯಾಗಿ ನಮೂದಿಸಿರುವಲ್ಲಿ ಮತ್ತು ತಾನು ಗೊತ್ತುಪಡಿಸುವ ಕಾಲದೊಳಗೆ ಆ ಮೌಲ್ಯ ನಿಗದಿಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವು ವಾದಿಯನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ;
>
> (ಸಿ) ಕೇಳಲಾದ ಪರಿಹಾರದ ಮೌಲ್ಯವನ್ನು ಸರಿಯಾಗಿ ನಮೂದಿಸಿದ್ದರೂ, ಸಾಕಷ್ಟು ಸ್ಟಾಂಪುಗಳಿಲ್ಲದ ಕಾಗದದ ಮೇಲೆ ವಾದಪತ್ರವನ್ನು ಬರೆದಿರುವಲ್ಲಿ, ಮತ್ತು ನ್ಯಾಯಾಲಯವು ತಾನು ಗೊತ್ತುಪಡಿಸುವ ಕಾಲದೊಳಗೆ ಅಗತ್ಯವಾದ ಸ್ಟಾಂಪು ಕಾಗದವನ್ನು ವಾದಿಯು ಒದಗಿಸಬೇಕೆಂದು ಅವನನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ;

(ಇ) ಅದನ್ನು ದ್ವಿಪ್ರತಿಯಲ್ಲಿ ದಾಖಲಿಸಿಲ್ಲದಿದ್ದಲ್ಲಿ;

(ಎಫ್) ವಾದಿಯು 9ನೇ ನಿಯಮದ ಉಪಬಂಧದಲ್ಲಿ ಉಲ್ಲೇಖಿಸಿದ ದಾಖಲೆಗಳನ್ನು ಒದಗಿಸುವಲ್ಲಿ ವಿಫಲನಾಗಿದ್ದಲ್ಲಿ;

ಪರಂತು, ನ್ಯಾಯಾಲಯವು ಗೊತ್ತುಪಡಿಸಿದ ಕಾಲದೊಳಗೆ, ಸಂದರ್ಭಾನುಸಾರ, ಮೌಲ್ಯ ನಿಗದಿಯನ್ನು ಸರಿಪಡಿಸಲಾಗದಂತೆ ಅಥವಾ ಅಗತ್ಯವಿರುವಷ್ಟು ಸ್ಟಾಂಪು ಕಾಗದಗಳನ್ನು ಒದಗಿಸಲಾದಂತೆ ವಾದಿಯು ಅಸಾಧಾರಣ ಸ್ವರೂಪದ ಯಾವುದೇ ಕಾರಣದಿಂದಾಗಿ ಪ್ರತಿಬಂಧಿತನಾಗಿದ್ದನೆಂದು ಮತ್ತು ಆ ಕಾಲವನ್ನು ವಿಸ್ತರಿಸಲು ಇನಕಾರ ಮಾಡುವುದರಿಂದಾಗಿ ವಾದಿಗೆ ಗುರುತರ ಅನ್ಯಾಯವುಂಟಾಗುವುದೆಂದು, ನ್ಯಾಯಾಲಯಕ್ಕೆ ಮನದಟ್ಟಾದ ಹೊರತು, ತಾನು ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ಮೌಲ್ಯ ನಿಗದಿಯನ್ನು ಸರಿಪಡಿಸಲು ಅಥವಾ ಅಗತ್ಯವಿರುವಷ್ಟು ಸ್ಟಾಂಪು ಕಾಗದಗಳನ್ನು ಒದಗಿಸಲು ಗೊತ್ತುಪಡಿಸಿದ ಅವಧಿಯನ್ನು ಅದು ವಿಸ್ತರಿಸತಕ್ಕುದಲ್ಲ.

ಮೇಲಿನ ಉಪಬಂಧವನ್ನು ಸರಳವಾಗಿ ಓದಿಕೊಳ್ಳುವ ಮೂಲಕ ಸಿಪಿಸಿಯ ಕ್ರಮಾದೇಶ VII ನಿಯಮ 11ರಲ್ಲಿ ನಿರೂಪಿತ ಅಂಶಗಳಿಂದ ದಾವೆಯನ್ನು ಯಾವುದೇ ಹಂತದಲ್ಲಿ ವಜಾಗೊಳಿಸಬಹುದಾಗಿದೆ ಎಂಬುದನ್ನು ವಾದಿಗಳಿಗೆ ಸ್ಪಷ್ಟಪಡಿಸಲು ಇಚ್ಛಿಸುತ್ತೇವೆ. ನ್ಯಾಯಾಲಯವು ಸಿಪಿಸಿಯ ಕ್ರಮಾದೇಶ VII ರ 11ನೇ ನಿಯಮದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ ದಾವೆಯ ವ್ಯವಹರಣೆಗಳ ಪ್ರಾರಂಭದಲ್ಲಿ ಮಾತ್ರವಲ್ಲದೇ, ವ್ಯವಹರಣೆಯ ಯಾವುದೇ ಹಂತದಲ್ಲಿ ದಾವೆಯನ್ನು

ವಜಾಗೊಳಿಸಬಹುದಾಗಿದೆ. ಆದುದರಿಂದ, ವ್ಯವಹರಣೆಗಳ ಪ್ರಾರಂಭವಾದ ಹಂತದಲ್ಲಿಯೇ ವಾದಿಯ ಅರ್ಜಿಯು ವಜಾಗೊಳಿಸಿರುವಾಗ ಎಲ್ಲ ವಿವಾದಾಂಶಗಳಿಗೆ ಉತ್ತರಿಸುವ ಅವಶ್ಯಕತೆ ಇರುವುದಿಲ್ಲ. ಇದು ಸದರಿ ಉಪಬಂಧದ ಉದ್ದೇಶವಾಗಿದೆ ಮತ್ತು ಧ್ಯೇಯವಾಗಿದೆ. ಮೇಲೆ ಮಾಡಿದ ಚರ್ಚೆಯನ್ನು ಹಿನ್ನೆಲೆಯಾಗಿಟ್ಟುಕೊಂಡು, ನಾವು ಈ ವಾದಾಂಶವನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಪರಿಗಣಿಸಿದ್ದೇವೆ. ಅದರಂತೆ ವಾದಿಯ ವಾದವನ್ನು ವಜಾಗೊಳಿಸಿದ ವಿಚಾರಣಾ ನ್ಯಾಯಾಲಯದ ನಿರ್ಣಯವು ಸರಿಯಾದುದಾಗಿದೆ ಎಂದು ಅಭಿಪ್ರಾಯಪಡುತ್ತೇವೆ.

ಮೇಲೆ ಮಾಡಿದ ಚರ್ಚೆಯ ದೃಷ್ಟಿಯಲ್ಲಿ ಗುಣಾರ್ಹತೆ ಇಲ್ಲದೆ ಈ ಅಪೀಲನ್ನು ವಜಾಗೊಳಿಸಲಾಗಿದೆ. ನಾವು ಹೆಚ್ಚುವರಿ ಅಡ್ವೊಕೇಟ್ ಜನರಲ್‌ರವರು ಐ.ಎ. ಸಂ.1/2016ರಲ್ಲಿ ದಾವೆಯನ್ನು ಹೂಡಲು ಆಗಿರುವ 1141 ದಿನಗಳ ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಸಲ್ಲಿಸಿದ ಅಪೀಲಿನಲ್ಲಿ ಮಂಡಿಸಿದ ವಾದವನ್ನು ಆಲಿಸಿರುತ್ತೇವೆ, ಮುಖ್ಯ ವಿಷಯವಾಗಿ ಅವಧಿಯ ಅರ್ಹತೆಯ ಮೇಲೆ ನಾವು ವಾದವನ್ನು ಆಲಿಸಿರುತ್ತೇವೆ ಮತ್ತು ಈ ತೀರ್ಪಿನ ಮೂಲಕ ಅದನ್ನು ವಜಾಗೊಳಿಸಿರುತ್ತೇವೆ, ನಮಗೆ ಸದರಿ ಅರ್ಜಿಯ ಮೇಲೆ ಪ್ರತ್ಯೇಕ ಆದೇಶವನ್ನು ಹೊರಡಿಸುವ ಅವಶ್ಯಕತೆ ಕಂಡುಬಂದಿರುವುದಿಲ್ಲ. ಗುಣಾರ್ಹತೆಯ ಮೇಲೆ ಅಪೀಲನ್ನು ವಜಾಗೊಳಿಸಲಾಗಿದೆ. ಐ.ಎ. ಸಂ.1/2016 ಅನ್ನು ಸಹ ವಜಾಗೊಳಿಸಲಾಗಿದೆ.